ಓ ಎಸ್ ನಂಃ 447/2023
ಪಿ. ಡಬ್ಲ್ಯೂ- 1

**(ಇಂದು ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದ**

ನನ್ನ ಅಜ್ಜನ ಹೆಸರು ಸಂಗಪ್ಪ. ಆತ 2013 ತೀರಿಕೊಂಡಿರುತ್ತಾನೆ. ನನ್ನ ಅಜ್ಜಿಯ ಹೆಸರು ಬಸಮ್ಮ. ನನ್ನ ಅಜ್ಜನಿಗೆ ನನ್ನ ತಂದೆ ಮತ್ತು ಜಯಶ್ರೀ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ಅಜ್ಜ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ನೆನಿಪಿರುವುದಿಲ್ಲ. ನನ್ನ ತಾಯಿಯ ಹೆಸರು ಸುಜಾತಾ. 2003 ರಿಂದ ನಾನು ಮತ್ತು ನನ್ನ ತಾಯಿ ನನ್ನತಂದೆಯೊಂದಿಗೆ ವಾಸವಾಗಿರುವುದಿಲ್ಲ. ನನ್ನ ತಾಯಿಯ ತಾಯಿ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿಯ ಮೇಲೆ ಹಲವಾರು ಪ್ರಕರಣ ದಾಖಲಾಗಿರುತ್ತವೆ ಎಂದರೆ ಸರಿ. ನಾನು 2002 ರಲ್ಲಿ ಜನಿಸಿರುತ್ತೇನೆ. ನನ್ನ ಅಜ್ಜ ಆಲಮಟ್ಟಿಯಲ್ಲಿ ವಾಸವಾಗಿದ್ದರು. ನನ್ನ ತಂದೆ ಶಿಕ್ಷಕ ನಾಗಿದ್ದಾನೆ. ನನ್ನ ತಂದೆ 1998 ರಲ್ಲಿ ಶಿಕ್ಷಕನಾಗಿ ನೇಮಕ ಹೊಂದಿರುತ್ತಾನೆ ಎಂದರೆ ಸರಿ. ದಾವಾ ಅ ಆಸ್ತಿ ನನ್ನ ಅಜ್ಜನ ಆಸ್ತಿ ಆಗಿರುತ್ತದೆ. ಸದರಿ ಆಸ್ತಿ ಬಿಟ್ಟು ಬೇರೆ ಕೃಷಿ ಜಮೀನುಗಳು ಇರುವುದಿಲ್ಲ. ಸದರಿ ಆಸ್ತಿಯನ್ನು ಒಂದು ಬಾರಿ ನೋಡಿರುತ್ತೇನೆ. ನಾನು ಹೋದಾಗ ಸದರಿ ಆಸ್ತಿಯಲ್ಲಿ ಯಾವುದೇ ಬೆಳೆ ಇರಲಿಲ್ಲ. ದಾವಾ ಅ ಆಸ್ತಿ ಒನಬೇಸಾಯ ಜಮೀನು ಎಂದರೆ ಸರಿಯಲ್ಲ. ಸದರಿ ಕೃಷಿ ಜಮೀನಿಂದ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನನ್ನ ತಂದೆ ಮಾತ್ರ ದುಡಿಯುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನಮ್ಮೊಂದಿಗೆ ಸಂಬಂದ ಚೆನ್ನಾಗಿರುತ್ತದೆ. ನನ್ನ ತಂದೆ ನಮ್ಮ ಜೊತೆ ಮತ್ತು 2 ನೇ ಪ್ರತಿವಾದಿ ಜೊತೆ ಮಾತನಾಡುವುದಿಲ್ಲ ಎಂದರೆ ಸಾಕ್ಷಿಯು ಆಕೆ ಜೊತೆ

ಮಾತನಾಡುವುದಿಲ್ಲ. 2 ನೇ ಪ್ರತಿವಾದಿಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ದಾವಾ ಬಿ ಆಸ್ತಿ ಮಲ್ಲಿಗವಾಡದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಬಿ ಆಸ್ತಿಯನ್ನು 1 ನೇ ಪ್ರತಿವಾದಿ ನನ್ನ ಅಜ್ಜನ ಹೆಸರಿನಲ್ಲಿ 2006 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಬೇರೆ ಬೇರೆ ಕಡೆ ವರ್ಗಾವಣೆ ಆಗುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.